**ಕರ್ನಾಟಕ ಮಾತೃತ್ವ ಅನುಕೂಲಗಳ (ತಿದ್ದುಪಡಿ) ನಿಯಮಗಳು, 2018ರ ಮೇಲಿನ ಸಲಹೆಗಳು**

ಘನತೆವೆತ್ತ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯು (ಕ.ಸ.) ಮಾತೃತ್ವ ಅನುಕೂಲಗಳ ಕಾಯ್ದೆ, 1961 ("**ಕಾಯ್ದೆ**")ಯ ಅನುಚ್ಛೇದ 28ರ ಅಡಿಯಲ್ಲಿ ಉಲ್ಲೇಖಿಸಿರುವ "*ಸೂಕ್ತ ಸರ್ಕಾರ*" ದ ಪರಿಮಿತಿಯಲ್ಲಿ ಬರುವ ಕಾರಣದಿಂದ *ಕಾಯ್ದೆಯ ಉದ್ದೇಶಗಳನ್ನು ಸಾಕಾರಗೊಳಿಸಲು* ಸಂಬಂಧಿತ ನಿಯಮಗಳನ್ನು ರೂಪಿಸಲು ಸಶಕ್ತವಾಗಿದೆ, ಈ ನಿಟ್ಟಿನಲ್ಲಿ ಕರ್ನಾಟಕ ಮಾತೃತ್ವ ಅನುಕೂಲಗಳ (ತಿದ್ದುಪಡಿ) ನಿಯಮಗಳು 2018 ("**ಕರಡು ನಿಯಮಗಳು**") ಅನ್ನು ಇಲಾಖೆಯು ಸಿದ್ಧಪಡಿಸಿದೆ ಎಂಬುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ.

"*ಐವತ್ತು ಅಥವಾ ಅದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಪ್ರತಿ ಸ್ಥಾಪನೆಯಲ್ಲಿ*" ಕ್ರೀಚ್ ಸೌಕರ್ಯವನ್ನು ಒದಗಿಸಲು, 2017ರ ತಿದ್ದುಪಡಿಯ ಅನುಸಾರದ ಮೂಲಕ ಸೇರಿಸಲಾದ ಕಾಯ್ದೆಯ ಪರಿಚ್ಛೇದ11ಎ ಅಡಿಯಲ್ಲಿನ ಉದ್ದೇಶಗಳನ್ನು ಜಾರಿಗೊಳಿಸಲು ಈ ಕರಡು ನಿಯಮಗಳನ್ನು ರೂಪಿಸಲಾಗಿದೆ. ಕಾಯ್ದೆಯ ಅನುಚ್ಛೇದ 11ಎ ನ ಅನುಸಾರ ಸೂಕ್ತ ಸರ್ಕಾರವು ಒದಗಿಸಬೇಕಾಗಿರುವ ಕ್ರೀಚ್ ಸೌಕರ್ಯದ ಅಂತರವನ್ನು ಹಾಗು ಆ ಸೌಕರ್ಯವು ಪ್ರತ್ಯೇಕವಾಗಿರುವುದೇ ಅಥವಾ ಸಾಮಾನ್ಯ ಸೌಕರ್ಯದ ಭಾಗವಾಗಿರುವುದೇ ಎಂಬುದನ್ನು ಸೂಚಿಸಬಹುದು.

ಕರಡು ನಿಯಮಗಳಿಗೆ ನಮ್ಮ ಸಲಹೆಗಳನ್ನು ಒದಗಿಸುವಲ್ಲಿ, ಆರು ವರ್ಷದೊಳಗಿನ ಮಕ್ಕಳಿಗೆ ಬಾಲ್ಯದ ಕಾಳಜಿಯ ಮತ್ತು ಶಿಕ್ಷಣದ ("**ECCE**") ಮೇಲೆ ಮಾರ್ಗದರ್ಶಿ ತತ್ವಗಳನ್ನು ವಿಧಿಸಿರುವ ಈ ಕೆಳಗಿನ ಕಾನೂನುಗಳನ್ನು ಮತ್ತು ಕಾರ್ಯನೀತಿಗಳ ಅಂಶಗಳನ್ನು ನಾವು ಗಣನೆಗೆ ತೆಗೆದುಕೊಂಡಿದ್ದೇವೆ:

ಭಾರತದ ಸಂವಿಧಾನದ 45ನೇ ವಿಧಿಯ ಅನುಸಾರ ಎಲ್ಲಾ ಮಕ್ಕಳಿಗೆ ಆರು ವರ್ಷಗಳ ವಯಸ್ಸು ಪೂರ್ಣಗೊಳ್ಳುವವರೆಗೆ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಒದಗಿಸಲು ಪ್ರತಿ ರಾಜ್ಯವು ಪ್ರಯತ್ನಿಸಬೇಕು ಎಂದು ತಿಳಿಸುತ್ತದೆ.

2013 ರಲ್ಲಿ ಅಳವಡಿಸಿಕೊಂಡ ರಾಷ್ಟ್ರೀಯ ಇಸಿಸಿಇ ನೀತಿಯ ಅನುಸಾರ ಪ್ರಸವಪೂರ್ವ ಅವಧಿಯಿಂದ ಆರು ವರ್ಷ ವಯಸ್ಸಿನವರೆಗೆ ಎಲ್ಲಾ ಮಕ್ಕಳ ಸಮಗ್ರ ಬೆಳವಣಿಗೆಗಾಗಿ ಸಂಯೋಜಿತ ಸೇವೆಗಳನ್ನು ಒದಗಿಸಲು ಭಾರತದ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ ಬಿಡುಗಡೆ ಮಾಡಿರುವ ರಾಷ್ಟ್ರೀಯ ಇಸಿಸಿಇ ಪಠ್ಯಕ್ರಮ ಚೌಕಟ್ಟು (National ECCE Curriculum Framework), ಆರಂಭಿಕ ಆರೈಕೆ ಮತ್ತು ಕಲಿಕೆಯ ಗುರಿಗಳನ್ನು ಪ್ರತಿಪಾದಿಸುತ್ತದೆ, ಮತ್ತು ಸೇವಾದಾರರು, ಸಮುದಾಯಗಳು ಮತ್ತು ರಾಜ್ಯ ಸರ್ಕಾರಗಳಿಗೆ ಅನುಷ್ಠಾನ ಚೌಕಟ್ಟನ್ನು ಒದಗಿಸುತ್ತದೆ.

ಶಿಕ್ಷಣ ಪಡೆಯುವ ಹಕ್ಕು ಕಾಯ್ದೆ, 2011ರ ಅನುಚ್ಛೇದ11ರ ಅನುಸಾರ "ಮೂರು ವರ್ಷ ವಯಸ್ಸನ್ನು ಮೇಲ್ಪಟ್ಟ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ತಯಾರು ಮಾಡುವ ಮತ್ತು ಆರು ವರ್ಷ ವಯಸ್ಸಿನವರೆಗೆ ಎಲ್ಲಾ ಮಕ್ಕಳಿಗೂ ಇಸಿಸಿಐ ಒದಗಿಸುವ ದೃಷ್ಟಿಯಿಂದ, ಸೂಕ್ತ ಸರ್ಕಾರವು ಅಂತಹ ಮಕ್ಕಳಿಗೆ ಉಚಿತ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಸಲುವಾಗಿ ಅಗತ್ಯವಾದ ವ್ಯವಸ್ಥೆಗಳನ್ನು ಮಾಡಬಹುದು" ಎಂದು ಸೂಚಿಸುತ್ತದೆ.

"ಆರಂಭಿಕ ಕ್ಷಣಗಳು ಪ್ರತಿ ಮಗುವಿಗೆ ಮಹತ್ವವಾಗಿರುತ್ತವೆ" ("Early moments matter for every child") ಎಂಬ ಶೀರ್ಷಿಕೆಯಲ್ಲಿ 2017ರಲ್ಲಿ ಬಿಡುಗಡೆಯಾದ UNICEFನ ಜಾಗತಿಕ ವರದಿಯ, ಪರಿಕಲ್ಪನೆಯಿಂದ ಶಾಲೆಯ ಪ್ರಾರಂಭದ ಅವಧಿಯು ನಿರ್ಣಾಯಕ ಮತ್ತು ಏಕಮಾತ್ರ ಪರದೆಯನ್ನು ತೆರೆಯುವ ಮೂಲಕ ಮಗುವಿನ ಮೆದುಳಿನ ಬೆಳವಣಿಗೆಯನ್ನು ರೂಪಿಸುವ ಅವಕಾಶವನ್ನು ಒದಗಿಸುತ್ತದೆ ಎಂದು ತಿಳಿಸಿದೆ.

ವಿಸ್ತಾರವಾಗಿ, ಕರಡು ನಿಯಮಗಳು ಕ್ರೀಚ್ ಸೌಲಭ್ಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ವಿವರಿಸುತ್ತದೆ:

1. ಸುಲಭಸಾಧ್ಯವಾಗಿ ದೊರಕುವಂತಿರಬೇಕು
2. ಭೌತಿಕ ಮೂಲಸೌಕರ್ಯದ ಗುಣಮಟ್ಟ
3. ಮಕ್ಕಳ ಆರೈಕೆಯ ಗುಣಮಟ್ಟ

ಮೇಲಿನ ಪ್ರತಿ ಅಂಶಗಳ ಮೇಲೆ ನಮ್ಮ ಆಕ್ಷೇಪಣೆಗಳು / ಸಲಹೆಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ. ಇವಲ್ಲದೆ, ನಾವು ಕರಡು ನಿಯಮವು ಕ್ರೀಚ್ ಸೌಲಭ್ಯಕ್ಕೆ ಸಂಬಂಧಿಸಿದಂತೆ ಒದಗಿಸಲು ವಿಫಲವಾಗಿರುವಂತಹ ಕೆಲವು ನಿರ್ಣಾಯಕ ವೈಶಿಷ್ಟ್ಯಗಳನ್ನು ನಾವು ಗುರುತಿಸಿದ್ದೇವೆ.

| | **ಪ್ರಸ್ತುತ ನಿಯಮ** | **ಆಕ್ಷೇಪಣೆಗಳು** | **ಸಲಹೆಗಳು** |
|---|---|---|---|
| | **ಸುಲಭಸಾಧ್ಯವಾಗಿ ದೊರಕುವಂತಿರಬೇಕು** | | |
| 1. | ನಿಯಮ 6ಎ(1) "ಸ್ಥಳ: ಸ್ಥಾಪನೆಯ ಪ್ರವೇಶದ್ವಾರದಿಂದ ಐದು ನೂರು (500) ಮೀಟರ್ ಒಳಗೆ ಅಥವಾ ಸ್ಥಾಪನೆಯ ಆವರಣದಲ್ಲಿಯೇ ಪ್ರತಿ ಮೂವತ್ತು (30) ಮಕ್ಕಳಿಗೆ ತಲಾ ಒಂದು ಕ್ರೀಚ್ ಸೌಲಭ್ಯವಿರಬೇಕು" | ಅಸಮಂಜಸತೆ ಮತ್ತು ಕಾಯ್ದೆಯು ನೀಡುವ ಅಧಿಕಾರ ವ್ಯಾಪ್ತಿಯನ್ನು ಮೀರಿರುವುದರಿಂದ ಈ ನಿಯಮವನ್ನು ಕಾಯ್ದೆಯ ಅನುಚ್ಛೇದ 11A ನ ತದ್ವಿರುದ್ಧವಾಗಿದೆ ಎಂಬ ಕಾರಣದಿಂದ ತೆಗೆದು ಹಾಕಬಹುದಾಗಿದೆ.<br><br>ಕಾಯ್ದೆಯ ಅನುಚ್ಛೇದ 11A, ಸ್ಥಾಪನೆಯು 50 ಅಥವಾ ಅದಕ್ಕಿಂತ ಹೆಚ್ಚು ನೌಕರರನ್ನು ಹೊಂದಿರುವವರೆಗೆ, ಕ್ರೀಚ್ ಸೌಲಭ್ಯವನ್ನು ಒದಗಿಸಬೇಕು ಎಂದು ಸ್ಪಷ್ಟವಾಗಿ ತಿಳಿಸುತ್ತದೆ. ಆದರೆ ನಿಯಮ 6A(1) ಈ ಅವಶ್ಯಕತೆಯನ್ನು 30 ಅಥವಾ ಅದಕ್ಕಿಂತ ಹೆಚ್ಚು ಮಕ್ಕಳಿರುವಾಗ ಮಾತ್ರ ಕ್ರೀಚ್ ಸೌಲಭ್ಯವನ್ನು ಒದಗಿಸಬೇಕೆಂದು ತಿಳಿಸುವ ಮೂಲಕ ಮೇಲಿನ ನಿಯಮವನ್ನು ದುರ್ಬಲಗೊಳಿಸಿದೆ.<br><br>ಇದು ಕೆಲಸ ಮಾಡುವ ಪ್ರತಿ ತಾಯಿಗೆ ಹೆರಿಗೆ ರಜೆಯ ನಂತರ ತಾನು ಕೆಲಸಕ್ಕೆ ಹಿಂದಿರುಗುವಾಗ ಕ್ರೀಚ್ ಸೌಲಭ್ಯಕ್ಕೆ ಅವಕಾಶವನ್ನು ಸುನಿಶ್ಚಿತಗೊಳಿಸುವ ಅನುಚ್ಛೇದ 11A ನ ಉದ್ದೇಶವನ್ನು ನಿರರ್ಥಕಗೊಳಿಸುತ್ತದೆ. | ಕ್ರೀಚ್ ಸೌಲಭ್ಯವು ಆರ್ಥಿಕವಾಗಿ ತೀವ್ರತೆಯುಳ್ಳ ಕ್ರಮವೆಂದು ಅರ್ಥಮಾಡಿಕೊಳ್ಳಬಹುದಾಗಿದೆ, ಆದರೆ ಇದು ಸಣ್ಣ ಸ್ಥಾಪನೆಗಳಿಗೆ ಮಹಿಳೆಯರನ್ನು ನೇಮಕಮಾಡಿಕೊಳ್ಳುವ ಅವಕಾಶಗಳಿಗೆ ಹೊಡೆತ ನೀಡುತ್ತದೆ.<br><br>ಆದ್ದರಿಂದ, ಕಾಯ್ದೆಯ ಉದ್ದೇಶಗಳನ್ನು ಈಡೇರಿಸುವುದರ ಜೊತೆಗೆ, ಹಣಕಾಸು ಕಾರ್ಯಸಾಧ್ಯತೆಯನ್ನು ಸುನಿಶ್ಚಿತಗೊಳಿಸಲು, ನಿಯಮವು ಒಂದು ಕಿಲೋಮೀಟರ್ ಒಳಗಿರುವ ಅನೇಕ ಸ್ಥಾಪನೆಗಳಿಗೆ ಇನ್ನೊಂದು ಸ್ಥಾಪನೆಯ ಸಹಯೋಗದೊಂದಿಗೆ ಸಾಮಾನ್ಯ ಕ್ರೀಚ್ ಸೌಕರ್ಯವನ್ನು ಒದಗಿಸುವ ಅವಕಾಶಕ್ಕೆ ಎಡೆಮಾಡಿಕೊಡಬಹುದು.<br><br>ಆದಾಗ್ಯೂ, ಒಂದು ಸ್ಥಾಪನೆಯಲ್ಲಿ ಕ್ರೀಚ್ ಸೌಲಭ್ಯಕ್ಕೆ ಆಯ್ಕೆಮಾಡಿರುವ 30 ಅಥವಾ ಅದಕ್ಕಿಂತ ಹೆಚ್ಚು ಮಹಿಳಾ ಉದ್ಯೋಗಿಗಳಿದ್ದಲ್ಲಿ, ಅಂತಹ ಸಂದರ್ಭದಲ್ಲಿ |

| | | | |
|---|---|---|---|
| | | | ಸ್ಥಾಪನೆಯ ಒಳಗೆ ಅಂತಹ ಸೌಲಭ್ಯಕ್ಕೆ ಅವಕಾಶ ಮಾಡಿಕೊಡಬೇಕು. |
| 2. | "ಉದ್ಯೋಗದಾತರು ಕ್ರೀಚ್ ನ ಸ್ಥಳವನ್ನು ಗುರುತಿಸುವಲ್ಲಿ ಎಚ್ಚರಿಕೆಯನ್ನು ವಹಿಸಬೇಕು. ಉದ್ಯೋಗದಾತರು ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯ ಭಾಗವಾಗಿ ರಾಜ್ಯ ಅಥವಾ ರಾಷ್ಟ್ರೀಯ ಬೆಂಬಲ ಏಜೆನ್ಸಿಗಳಿಂದ ತಜ್ಞ ಸಲಹೆಯನ್ನು ಪಡೆದುಕೊಳ್ಳಬೇಕು." | ಉದ್ಯೋಗದಾತರು ಸಮಾಲೋಚಿಸಬೇಕಾಗಿರುವ ಬೆಂಬಲ ಸಂಸ್ಥೆಗಳ ಗುರುತಿಸುವಿಕೆಗೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟತೆ ಇಲ್ಲ. | ನಿರ್ದಿಷ್ಟ ವಾರ್ಡ್ ಗಳಲ್ಲಿ ಕ್ರೀಚ್ ಸೌಲಭ್ಯಗಳನ್ನು ನೋಂದಾಯಿಸಿಕೊಳ್ಳುವ ಮತ್ತು ನಿಯಂತ್ರಿಸಲು ಅಧಿಕಾರವಿರುವ ನೋಡಾಲ್ ಸಂಸ್ಥೆಗಳನ್ನು ರಾಜ್ಯ ಸರ್ಕಾರವು ಗುರುತಿಸಿ ನೇಮಕಮಾಡಬೇಕು. ಸೂಕ್ತವಾದ ಮಾರ್ಗಸೂಚಿಗಳನ್ನು ಒದಗಿಸುವ ಮೂಲಕ ನಗರ ಸ್ಥಳೀಯ ಸಂಸ್ಥೆಗಳಿಗೆ ಇದನ್ನು ವಹಿಸಬೇಕು.<br><br>ಕ್ರೀಚ್ ಸೌಲಭ್ಯಗಳನ್ನು ನಿಯಂತ್ರಿಸುವ ಇತರ ವಿಷಯಗಳೊಂದಿಗೆ ಸ್ಥಾಪಿಸಲಾದ ಪ್ರತ್ಯೇಕ ECCE ಕೌನ್ಸಿಲ್ ನೊಂದಿಗೆ, ಆರು ವರ್ಷ ಒಳಗಿರುವ ಮಕ್ಕಳಿಗೆ ECCE ಯನ್ನು ಒದಗಿಸುವ ಸಂಸ್ಥೆಗಳ ಸಂಪೂರ್ಣ ವಲಯವನ್ನು ನಿಯಂತ್ರಿಸುವ ಸಮಗ್ರ ಶಾಸನವನ್ನು ರಾಜ್ಯ ಸರ್ಕಾರವು ಜಾರಿಗೆ ತರುವುದು ದೀರ್ಘಕಾಲದ ಪರಿಹಾರವಾಗಿದೆ. |
| | **ಭೌತಿಕ ಮೂಲಸೌಕರ್ಯ** | | |
| 3. | ನಿಯಮ 6A(2) 'ಕಟ್ಟಡ ಮತ್ತು ಸೌಲಭ್ಯಗಳು' ಇದರ ಕುರಿತು ಮಾತನಾಡುತ್ತದೆ. | ನಿಯಮ 6A (2)(xiv)ನ ಅನುಸಾರ, ಕ್ರೀಚ್ ಗೆ ಸಂಬಂಧಿಸಿದ ಮಾನದಂಡಗಳು ಮತ್ತು ರೂಢಿಗಳನ್ನು ಕೇಂದ್ರೀಯ ಮತ್ತು ರಾಜ್ಯ ಸರ್ಕಾರಗಳು ನಿಗದಿಪಡಿಸುತ್ತದೆಯಾದರೂ, ಅವುಗಳ ಅನುಪಸ್ಥಿತಿಯಲ್ಲಿ, ನಿಯಮಗಳು ಕ್ರೀಚ್ ಸೌಲಭ್ಯದ ಭಾಗವಾಗಿರಬಹುದಾದ ವಿಕಲಾಂಗ ಮಕ್ಕಳು ಮತ್ತು ವಿಭಿನ್ನ ವಯೋಮಾನದ ಮಕ್ಕಳನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲವಾಗಿವೆ.<br>ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಟ್ಟಡದ ಗುಣಮಟ್ಟದ ನಡುವಿನ ವ್ಯತ್ಯಾಸವು ತಾರತಮ್ಯಕರವಾಗಿದೆ ಮತ್ತು ಅನಿಯಂತ್ರಿತವಾಗಿದೆ. | ರಾಷ್ಟ್ರೀಯ ಇಸಿಸಿಇ ಪಠ್ಯಕ್ರಮ ಚೌಕಟ್ಟು (National ECCE Curriculum Framework) ಮೂಲಭೂತ ಸೌಕರ್ಯ ಮತ್ತು ಸಿಬ್ಬಂದಿ ಬೆಂಬಲದ ಮೂಲಕ ವಿಶೇಷ ಅಗತ್ಯತೆಗಳನ್ನು ಹೊಂದಿರುವ ಮಕ್ಕಳನ್ನು ಸೇರ್ಪಡೆಗೊಳಿಸುವ ಅಂಶಕ್ಕೆ ಸಂಬಂಧಿಸಿದಂತೆ ಮಾತನಾಡುತ್ತದೆ.<br><br>ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಕ್ರೀಚ್ ಗೆ ವಿಧಿಸಿರುವ ವಿಭಿನ್ನ ಮಾನದಂಡಗಳನ್ನು ತೆಗೆದುಹಾಕಬೇಕು.<br>ನಿಯಮಗಳು ಇಸಿಸಿಇ ಚೌಕಟ್ಟಿನಲ್ಲಿರುವ ಅಗತ್ಯಗಳಿಗೆ ಬದ್ಧರಾಗಿರುವಂತೆ ಕ್ರೀಚ್ ಸೌಲಭ್ಯಗಳಿಗೆ ನಿರ್ದೇಶಿಸಬೇಕು. |

| | | | |
|---|---|---|---|
| | **ಆರೈಕೆಯ ಗುಣಮಟ್ಟ** | | |
| 4. | ನಿಯಮ 6A(3) 'ಸಿಬ್ಬಂದಿ' ಗೆ ಸಂಬಂಧಿಸಿದಂತೆ ಮಾತನಾಡುತ್ತದೆ, ಇದರ ಅನುಸಾರ ಇಸಿಸಿಇ ಅಥವಾ ಟಿ.ಸಿ.ಸಿಯಲ್ಲಿ ತರಬೇತಿಯನ್ನು ಪಡೆದ ಮಹಿಳೆ ಕ್ರೀಚ್ ನ ಉಸ್ತುವಾರಿಯನ್ನು ನೋಡಿಕೊಳ್ಳಬೇಂದು ಹೇಳುತ್ತದೆ. | ಪ್ರಸ್ತುತ ಯಾವುದೇ ಸರ್ಕಾರ ಅನುಮೋದಿತ ಅಥವಾ ಮಾನ್ಯತೆಯಿರುವ ಇಸಿಸಿಇ ತರಬೇತಿ ಇಲ್ಲ.<br><br>ಸ್ಥಳೀಯ ಪೊಲೀಸರಿಂದ ಸಿಬ್ಬಂದಿಗಳ ಹಿನ್ನೆಲೆ ಪರಿಶೀಲನೆ ಅಥವಾ ಸರ್ಕಾರವು ಪರಿಶೀಲಿಸಿದ ಮತ್ತು ನೋಂದಾಯಿತ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ ಯಾವುದೇ ಉಪಬಂಧಗಳನ್ನು ನಿಯಮವು ಒದಗಿಸಿರುವುದಿಲ್ಲ. | ಕ್ರೀಚ್ ಮತ್ತು ಇತರ ಇಸಿಸಿಇ ಸೌಲಭ್ಯಗಳಲ್ಲಿನ ಪ್ರಸ್ತುತ ಶಿಕ್ಷಕರು ಮತ್ತು ಉಸ್ತುವಾರಿದಾರರು ಸಮರ್ಪಕ ಕಾನೂನು ಚೌಕಟ್ಟಿರದ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಸ್ಥೆಗಳು ಅತ್ಯಂತ ದುರ್ಬಲ ವಯಸ್ಸಿನಲ್ಲಿರುವ ಮಕ್ಕಳ ಉಸ್ತುವಾರಿಯನ್ನು ಹೊಂದಿರುವುದರಿಂದ ಇದು ಆತಂಕಾರಿಯಾದ ವಿಚಾರವಾಗಿದೆ.<br><br>ಖಾಸಗಿ ಇಸಿಸಿಇ ಸೌಲಭ್ಯಗಳಲ್ಲಿ ಮಕ್ಕಳ ನೋಂದಣಿ ಸಂಖ್ಯೆ ಹೆಚ್ಚಾಗುವುದರೊಂದಿಗೆ, ಕನಿಷ್ಟ ಮಟ್ಟದ ಆರೈಕೆಗೆ ಇವುಗಳ ಬದ್ಧತೆಯನ್ನು ಸುನಿಶ್ಚಿತಗೊಳಿಸಲು ಸರ್ಕಾರ ಸರಿಯಾದ ಹೆಜ್ಜೆಗಳನ್ನು ತೆಗೆದುಕೊಳ್ಳಲು ಇದು ಸಕಾಲವಾಗಿದೆ. ಮುಂದಿದೆ. ಚಿಕ್ಕ ಮಕ್ಕಳೊಂದಿಗೆ ಸಲುಗೆಯ, ಜಾಗರೂಕ ಆರೈಕೆಯ ಸಂಬಂಧವನ್ನು ಬೆಳೆಸಲು ಶಿಕ್ಷಕರಿಗೆ/ಪಾಲನೆ ಮಾಡುವವರಿಗೆ ಈ ನಿಟ್ಟಿನಲ್ಲಿ ಅಗತ್ಯವಾಗಿರುವಂತಹ ಸಾಮರ್ಥ್ಯ ಮತ್ತು ಮನೋಧರ್ಮವನ್ನು ಹೊಂದಲು ತರಬೇತಿ ನೀಡಬೇಕು.<br><br>ಕ್ರೀಚ್ ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರಿಗೆ ಸರ್ಕಾರಿ ಅನುಮೋದಿತ ಇಸಿಸಿಇ ತರಬೇತಿ ಕೋರ್ಸ್ ಹಾಗು ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿ ಸಿಬ್ಬಂದಿಯ ಹಿನ್ನೆಲೆ ಪರಿಶೀಲನೆಯನ್ನು ಕಡ್ಡಾಯವಾಗಿ ಮಾಡಬೇಕು. |
| 5. | ನಿಯಮ 6(D) 'ಹೊರಾಂಗಣ ಆಟದ ಸೌಲಭ್ಯಗಳು' ಇದರ ಕುರಿತಾಗಿ ಮಾತನಾಡುತ್ತದೆ. | ಇದು ಕ್ರೀಚ್ ಸೌಕರ್ಯದಲ್ಲಿ ಮಕ್ಕಳ 'ಶಿಕ್ಷಣ' ಅಂಶವನ್ನು ಹೊಂದಿರುವ ಏಕೈಕ ನಿಬಂಧನೆಯಾಗಿದೆ.<br><br>ಮಕ್ಕಳ ಅತಿ ಶೀಘ್ರ ಬೆಳವಣಿಗೆಯ ಹಂತದಲ್ಲಿ ಮಕ್ಕಳಿಗೆ ಉತ್ತೇಜಕ ಮತ್ತು ಪೋಷಣೆ ಪರಿಸರವನ್ನು ಒದಗಿಸುವ ಮಹತ್ವವನ್ನು ರಾಷ್ಟ್ರೀಯ ಇಸಿಸಿಇ ನೀತಿ ಮತ್ತು ಪಠ್ಯಕ್ರಮ ಚೌಕಟ್ಟು ಒತ್ತಿಹೇಳುತ್ತದೆ. | ನಿಯಮಗಳು ಎರಡು ವಯಸ್ಸಿನ ಗುಂಪುಗಳಿಗೆ: 0 -3 ವರ್ಷಗಳು ಮತ್ತು 3 - 6 ವರ್ಷಗಳು, ಯೋಗ್ಯವಾದ ಪುಸ್ತಕಗಳು ಮತ್ತು ಆಟಿಕೆಗಳನ್ನು ಹೊಂದುವಂತೆ ಕ್ರೀಚ್ ಸೌಲಭ್ಯಗಳಿಗೆ ಆದೇಶಿಸಬೇಕು.<br><br>ರಾಷ್ಟ್ರೀಯ ಇಸಿಸಿಇ ನೀತಿ ಮತ್ತು ಪಠ್ಯಕ್ರಮ ಚೌಕಟ್ಟಿನ ಅಡಿಯಲ್ಲಿ ನೀಡಲಾಗಿರುವ ಅವಶ್ಯಕತೆಗಳಿಗೆ ಬದ್ಧರಾಗಿರಲು ಕಡ್ಡಾಯಗೊಳಿಸಬೇಕು. |

ಕರಡು ನಿಯಮಗಳಿಗೆ ನಮ್ಮ ಸಲಹೆಗಳ ಸಾರಾಂಶವು ಈ ಕೆಳಕಂಡಂತಿವೆ:

1. ಸುಲಭಸಾಧ್ಯವಾಗಿ ದೊರಕುವಂತಿರಬೇಕು:
    a. 30 ಮಕ್ಕಳ ಅಗತ್ಯವನ್ನು ತೆಗೆದುಹಾಕಲು ನಿಯಮ 6A(1) ಅನ್ನು ತಿದ್ದುಪಡಿ ಮಾಡುವುದು. ಬದಲಾಗಿ, ಕಾಯ್ದೆಯ ಅನುಸಾರದಂತೆ, 50 ಅಥವಾ ಅದಕ್ಕಿಂತ ಹೆಚ್ಚಿನ ಉದ್ಯೋಗಿಗಳಿರುವ ಸ್ಥಾಪನೆಯು ಕ್ರೀಚ್ ಸೌಲಭ್ಯದ ಅಗತ್ಯವಿರುವ ಪ್ರತಿಯೊಬ್ಬ ಮಹಿಳಾ ಉದ್ಯೋಗಿಗೆ ಅದರ ಅವಕಾಶವನ್ನು ಸುನಿಶ್ಚಿತಗೊಳಿಸಬೇಕು.
    b. ಬಹು ಸ್ಥಾಪನೆಗಳು ಸುಲಭಸಾಧ್ಯವಾಗಿ ದೊರಕುವಂತಿರುವ ಕ್ರೀಚ್ ಸೌಲಭ್ಯಗಳೊಂದಿಗೆ ಸಹಯೋಗವನ್ನು ಹೊಂದುವುದು. ಒಂದೇ ಸ್ಥಾಪನೆಯಲ್ಲಿ 30ಕ್ಕಿಂತ ಹೆಚ್ಚಿನ ಮಕ್ಕಳಿದ್ದ ಪಕ್ಷದಲ್ಲಿ, ಸ್ಥಾಪನೆಯ ಒಳಗೆ ಅಂತಹ ಪ್ರತ್ಯೇಕ ಕ್ರೀಚ್ ಸೌಲಭ್ಯಕ್ಕೆ ಅವಕಾಶ ಮಾಡಿಕೊಡಬೇಕು.

2. ಮೂಲಸೌಕರ್ಯ:
    a. ವಿಶೇಷ ಅವಶ್ಯಕತೆಗಳನ್ನು ಹೊಂದಿರುವ ಮಕ್ಕಳಿಗೆ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸಲು ನಿಯಮ 6A(2) ಅನ್ನು ತಿದ್ದುಪಡಿ ಮಾಡುವುದು.
    b. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಕಟ್ಟಡದ ಗುಣಮಟ್ಟ ನಡುವಿನ ವ್ಯತ್ಯಾಸವನ್ನು ತೆಗೆದುಹಾಕಬೇಕು.
    c. ರಾಷ್ಟ್ರೀಯ ಇಸಿಸಿಇ ನೀತಿ ಮತ್ತು ಪಠ್ಯಕ್ರಮ ಚೌಕಟ್ಟುಗಳ ಶಿಫಾರಸುಗಳಿಗೆ ಬದ್ಧರಾಗಿರುವುದು.

3. ಆರೈಕೆ ಮತ್ತು ಶಿಕ್ಷಣ
    a. ವಯಸ್ಸಿಗೆ ಅನುಗುಣವಾದ ಪುಸ್ತಕಗಳು, ಗೊಂಬೆಗಳು ಇತ್ಯಾದಿಗಳನ್ನು ಎರಡು ಪ್ರತ್ಯೇಕ ವಯಸ್ಸಿನ: 0 - 3 ವರ್ಷಗಳು ಮತ್ತು 3 - 6 ವರ್ಷಗಳು ಗುಂಪುಗಳಿಗೆ ಪೂರೈಸಬೇಕು.
    b. ಪಾಲನೆದಾರರು ಮತ್ತು ಶಿಕ್ಷಕರು ಇಸಿಸಿಇನಲ್ಲಿ ಮಾನ್ಯತೆ ಪಡೆದ ಸಂಸ್ಥೆಯ ಮೂಲಕ ತರಬೇತಿ ಪಡೆಯಬೇಕು.
    c. ಪಾಲನೆದಾರರು ಮತ್ತು ಶಿಕ್ಷಕರ ಹಿನ್ನೆಲೆ ಪರಿಶೀಲನೆ ಕಡ್ಡಾಯವಾಗಿರಬೇಕು.

ಕರಡು ನಿಯಮವು ಪ್ರಸ್ತುತ ಕರ್ನಾಟಕದಲ್ಲಿ ಇಸಿಸಿಇಯ ಸ್ಥಿತಿಯನ್ನು ಸುಧಾರಿಸುವತ್ತ ಪ್ರಾಯೋಗಿಕ ಹೆಜ್ಜೆಯಾಗಿದೆ. ಮಾತೃತ್ವ ಅನುಕೂಲಗಳ ಕಾಯ್ದೆ, 1961ಗೆ ಮಾಡಲಾದ ತಿದ್ದುಪಡಿಗಳು ಖಾಸಗಿ ಪ್ಲೇ ಹೋಂಗಳು, ಕ್ರೀಚ್ ಮತ್ತು ಪೂರ್ವ ಶಾಲೆಗಳನ್ನು ನಿಯಂತ್ರಿಸುವ ಸಮಗ್ರ ಕಾನೂನುಗಳನ್ನು ಒದಗಿಸುವ ಒಂದು ಉತ್ತಮ ಅವಕಾಶಕ್ಕೆ ಎಡೆಮಾಡಿಕೊಡುತ್ತವೆ. ಈ ಮೇಲೆ ತಿಳಿಸಿರುವಂತೆ ಕರಡು ನಿಯಮಗಳಿಗೆ ಇನ್ನಷ್ಟು ಸುಧಾರಣೆಯನ್ನು ತರಬಹುದಾದ ವ್ಯಾಪ್ತಿಯನ್ನು ಒಳಗೊಂಡಿದೆ. ಆದಾಗ್ಯೂ, ಖಾಸಗಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರ ಸಂಖ್ಯೆಯಲ್ಲಾಗುತ್ತಿರುವ ಏರಿಕೆಯಿಂದ, ಮಕ್ಕಳ ಸಮರ್ಪಕ ಆರೈಕೆ, ಪೋಷಣೆ ಮತ್ತು ಶಿಕ್ಷಣವನ್ನು ಖಾಸಗಿ ಸಂಸ್ಥೆಗಳ ಮುತುವರ್ಜಿಯ ಮೇಲೆ ಬಿಡಲಾಗುವುದಿಲ್ಲ, ಏಕೆಂದರೆ ಅವುಗಳ ಪ್ರಾಥಮಿಕ ಉದ್ದೇಶವು ಲಾಭದ ಮೇಲೆ ಕೇಂದ್ರೀಕೃತವಾಗಿದೆಯೇ ಹೊರತು ಸಾಮಾಜಿಕ ಕಳಕಳಿಯ ಮೇಲಲ್ಲ. ಆದ್ದರಿಂದ, ಕ್ರೀಚ್ ಸೌಲಭ್ಯಗಳು ಒಳಗೊಂಡಂತೆ ಎಲ್ಲಾ ಇಸಿಸಿಇ ಸಂಬಂಧಿತ ಸೌಲಭ್ಯಗಳನ್ನು ನೋಂದಾಯಿಸಲು, ನಿಯಂತ್ರಿಸಲು ಮತ್ತು ಪರಿಶೀಲಿಸಲು ಮುಡಿಪಾಗಿರುವ ಇಸಿಸಿಇ ಶಾಸನವನ್ನು ಹೊಂದುವುದು ಪ್ರಸ್ತುತ ಅಗತ್ಯವಾಗಿದೆ ಎಂದು ನಾವು ನಂಬುತ್ತೇವೆ.